ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ಸಚಿವರು) :

ಅ) ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಹೆಚ್ಚಿನ ಹಣ ನೀಡುವ ವಿಚಾರ ಸರ್ಕಾರವು ಪರಿಶೀಲನೆಯಲ್ಲಿದೆ.

ಆ) 1995-96ನೇ ಸಾಲಿನಲ್ಲಿ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಯೋಜನೆಯಡಿಯಲ್ಲಿ ರೂ. 110031.37 ಲಕ್ಷ ಹಾಗೂ ಯೋಜನೇತರ ಬಾಬಿನಲ್ಲಿ ರೂ. 135410.19 ಲಕ್ಷ ಹಣ ಒದಗಿಸಲಾಗಿದೆ. ಯೋಜನೆ ಬಾಬಿನಲ್ಲಿ ಒದಗಿಸಿದ ರೂ. 110031.37 ಲಕ್ಷ ಹಣದಲ್ಲಿ ಜಿಲ್ಲಾ ಪಂಚಾಯತಿಗಳಿಗೆ ರೂ. 37108.37 ಲಕ್ಷ ತಾಲ್ಲೂಕು ಪಂಚಾಯತಿಗಳಿಗೆ ರೂ. 46068.72 ಲಕ್ಷ ಮತ್ತು ಗ್ರಾಮ ಪಂಚಾಯತಿಗಳಿಗೆ ರೂ. 26854.28 ಲಕ್ಷ ಅನುದಾನವನ್ನು ನಿಗಧಿಗೊಳಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ನವೀಕರಣ ಕಾರ್ಡುಗಳಿಂದ ವಂಚಿತರಾದ ಪಲಾನುಭವಿಗಳಿಗೆ ಪರ್ಯಾಯ ವ್ಯವಸ್ಥೆ.

653 - ಶ್ರೀ ಸಂಗಣ್ಣ ಕರಡಿ (ಕೊಪ್ಪಳ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗ್ರಾಮೀಣ ಪ್ರದೇಶದಲ್ಲಿ ಇತ್ತೀಚೆಗೆ ಪಡಿತರ ಕಾರ್ಡುಗಳನ್ನು ನವೀಕರಣ ಮಾಡಲಾಗಿದ್ದು ಹಸಿರು ಕಾರ್ಡಿನ ಯೋಜನೆಯಡಿಯಲ್ಲಿ ಬರುವ ಅನೇಕ ಫಲಾನುಭವಿಗಳು ವಂಚಿತರಾಗಿದ್ದು ಈ ಜನಾಂಗಕ್ಕೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಜನಾಂಗಕ್ಕೆ ಪರ್ಯಾಯ ವ್ಯವಸ್ಥೆ ಮಾಡುವುದೇ;

ಶ್ರೀ ಎಸ್. ನಂಜಪ್ಪ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಗ್ರಾಮ ಸಭೆಗಳನ್ನು ನಡೆಸಿದ ಸಮಯದಲ್ಲಿ ಕೆಲವು ಕುಟುಂಬಗಳು ನಿಗದಿಪಡಿಸಿದ ಆದಾಯಕ್ಕಿಂತ ಹೆಚ್ಚಿಗೆ ಇದ್ದ ಕಾರಣ ಗ್ರಾಮ ಸಭೆಗಳಲ್ಲಿ ನಿರ್ದರಿಸಿದಂತೆ 1,36,151 ಹಸಿರು ಪಡಿತರ ಚೀಟಿಗಳನ್ನು ರದ್ದು ಪಡಿಸಿದೆ.

ಆ) ಆದಾಯಕ್ಕಿಂತ ಜಾಸ್ತಿಯಿರುವ ಕುಟುಂಬಗಳಿಗೆ ಕೇಸರಿ ಪಡಿತರ ಚೀಟಿಯನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ.

ಹೊಸ ಪಶುವೈದ್ಯ ಆಸ್ಪತ್ರೆಗಳ ಮಂಜೂರಾತಿ.

654 - ಶ್ರೀ ಸಂಗಣ್ಣ ಕರಡಿ (ಕೊಪ್ಪಳ) ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?